ಉತ್ತರಕನ್ನಡ ಜಿಲ್ಲೆಯಲ್ಲಿ ಕೈಗೊಂಡ ಮಲೆನಾಡು ಪ್ರದೇಶಾಭಿವೃದ್ಧಿ ಕಾಮಗಾರಿಗಳು

2962:(4087)

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ 97-98ನೇ ಸಾಲಿನಲ್ಲಿ ಕಾರವಾರ ವಿಭಾಗಕ್ಕೆ ಅನುಮೋದನೆ, ನೀಡಿದ ಕಾಮಗಾರಿಗಳ ಒಟ್ಟು ಮೊತ್ತ ಎಷ್ಟು?

ಆ. 97-98ನೇ ಸಾಲ್ಲಿಗೆ ಕಾಮಗಾರಿಗಳಿಗಾಗಿ ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಇ. ಬಿಡುಗಡೆ ಮಾಡಬೇಕಾದ ಹಣ ಎಷ್ಟು ಅದನ್ನು ಯಾವಾಗ ಬಿಡುಗಡೆ ಮಾಡಲಾಗವುದು.

ಈ. 98-99ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಗೊತ್ತುಪಡಿಸಿದ ಹಣವೆಷ್ಟು? (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

ಉ. 98-99ನೇ ಸಾಲಿನ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆಯೇ ನೀಡದಿದ್ದಲ್ಲಿ ಕಾರಣಗಳೇನು ಮತ್ತು ಯಾವಾಗ ಅನುಮೋದನೆ ನೀಡಲಾಗುವುದು.

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು):

ಅ. 176.96 ಲಕ್ಷ ರೂ.ಗಳು

ಆ. 162.13 ಲಕ್ಷ ರೂ.ಗಳು

ಇ. ಉಳಿಕೆ 14.830 ಲಕ್ಷ ಹಣವನ್ನು 1998-99ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಈ.

	ಕ್ಷೇತ್ರ	ನಿಗದಿಪಡಿಸಿದ ಮೊತ್ತ (ಲಕ್ಷ ರೂ.ಗಳಲ್ಲಿ)
1.	ಕುಮಟಾ	70.857
2.	ಅಂಕೋಲಾ	57.460
3.	ಕಾರವಾರ	53.510
4.	ಹಳಿಯಾಳ	52.150
5.	ಭಟ್ಕಳ	54.810
6.	ಸಿರಸಿ ಸಿದ್ದಾಪುರ	52.450
	ಒಟ್ಟು	341.237

ಉ. ದಿನಾಂಕ 24.10.1998ರಂದು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದೆ.

ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಐ.ಎಸ್.ಐ ಚಟುವಟಿಕೆಗಳು

2967:(4070)

ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವ್ಯಾಪಕ ಐ.ಎಸ್.ಐ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕಾನೂನು ಕ್ರಮಗಳೇನು?

ಇ) ಕೇಂದ್ರಸರ್ಕಾರ ಈ ಬಗ್ಗೆ ವರದಿಗಳನ್ನು ರಾಜ್ಯಸರ್ಕಾರದಿಂದ ಕೇಳಿದ್ದು ನಿಜವೇ?

ಈ) ಹಾಗಿದ್ದಲ್ಲಿ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಲಾಗಿದೆಯೇ?